ಶಿಗ್ಗಾಂವ್ ಬಸ್ ನಿಲ್ದಾಣ ಮತ್ತು ಸವಣೂರು ಬಸ್ ಡಿಪೋ ಕಾಮಗಾರಿ ಕೆಲಸ

೪೨೦ (೭೭೪) ಶ್ರೀ ಮಂಜುನಾಥ ಸಿ. ಕುನ್ನೂರ (ಶಿಗ್ಗಾಂವ್).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಶಿಗ್ಗಾಂವ್ ಬಸ್ ನಿಲ್ದಾಣ, ಸವಣೂರು ಡಿಪೋ ಅಡಿಗಲ್ಲು ಸಮಾರಂಭ ಮಾಡಿ ಎಷ್ಟು ದಿವಸಗಳಾದವು ?

ಆ) ಸದರಿ ಕಾಮಗಾರಿ ಯಾವ ಹಂತದಲ್ಲಿದೆ ?

ಇ) ಸದರಿ ಕೆಲಸಗಳನ್ನು ಇನ್ನು ಎಷ್ಟು ದಿವಸಗಳಲ್ಲಿ ಪ್ರಾರಂಭ ಮಾಡಲಾಗುವುದು ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು).—

ಅ) ಶಿಗ್ಗಾಂವ್ ಬಸ್ ನಿಲ್ದಾಣ ಮತ್ತು ಸವಣೂರು ಬಸ್ ಘಟಕಕ್ಕೆ ದಿನಾಂಕ ೨೮-೮-೯೩ರಲ್ಲಿ ಅಡಿಗಲ್ಲನ್ನು ಹಾಕಲಾಗಿದೆ.

ಆ) ಸದರಿ ಕಾಮಗಾರಿಗಳನ್ನು ೯೪-೯೫ನೇ ಸಾಲಿನಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದೆ.

ಇ) ೧೯೯೪-೯೫ರ ಮೊದಲ ತ್ರೈಮಾಸಿಕದಲ್ಲಿ ಪ್ರಾರಂಭ ಮಾಡಲಾಗುವುದು.

ಬೆಳಗಾವಿ ಜಿಲ್ಲೆಯಲ್ಲಿ ಚಿಮಣಿ ಎಣ್ಣೆ ಸಿಗದೇ ತೊಂದರೆ

೪೨೧ (೭೮೬) ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ).—ಮಾನ್ಯ ಆಹಾರ ಮತ್ತು ನಾಗರೀಕ ಸಲಬರಾಜು ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಬೆಳಗಾವಿ ಜಿಲ್ಲೆಯಲ್ಲಿ ಜನರಿಗೆ ನಿಯಮಿತವಾಗಿ ಚಿಮಣಿ ಎಣ್ಣೆ ಸಿಗದೆ ಇರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಚಿಮಣಿ ಎಣ್ಣೆ ಜನರಿಗೆ ಸರಿಯಾಗಿ ಒದಗಿಸಲು ಸರ್ಕಾರದವರು ಯಾವ ಕ್ರಮ ಕೈಗೊಂಡಿರುವರು ?

ಇ) ಬೆಳಗಾವಿ ಜಿಲ್ಲೆಗೆ ಪ್ರತಿ ತಿಂಗಳು ಎಷ್ಟು ಚಿಮಣಿ ಎಣ್ಣೆಯನ್ನು ಪಟ್ಟಣ ಪ್ರದೇಶಗಳಿಗೆ ಹಾಗೂ ಹಳ್ಳಿಗಳಿಗೆ ಕೊಡಲಾಗುತ್ತಿದೆ ?

ಈ) ಪಟ್ಟಣ ಪ್ರದೇಶದಲ್ಲಿರುವ ಜನರಿಗೆ ಚಿಮಣಿ ಎಣ್ಣೆಯನ್ನು ಪ್ರತಿಯೊಬ್ಬರಿಗೂ ಹೆಚ್ಚಿಗೆ ಕೊಡಲಾಗುತ್ತಿರುವ, ಹಾಗೂ ಹಳ್ಳಿಗಳಲ್ಲಿ ಇರುವ ಜನರಿಗೆ ಕಡಿಮೆ ಪ್ರಮಾಣದಲ್ಲಿ ಚಿಮಣಿ ಎಣ್ಣೆಯನ್ನು ಕೊಡಲಾಗುತ್ತಿರುವ ಸಂಗತಿ ನಿಜವೇ ?

ಉ) ಹಾಗಿದ್ದಲ್ಲಿ, ಸರ್ಕಾರದವರು ಹಂಚಿಕೆಯಲ್ಲಿ ಆಗುತ್ತಿರುವ ತಾರತಮ್ಯವನ್ನು ಹೋಗ ಲಾಡಿಸಲು ಕ್ರಮ ಕೈಗೊಳ್ಳುವರೇ ?

ಊ) ಪಡಿತರ ಚೀಟಿ ಇಲ್ಲದವರಿಗೆ ಚಿಮಣಿ ಎಣ್ಣೆ ಸಿಗದೆ ಇರುವುದರಿಂದ ಅವರಿಗೂ ಸಹ ಚಿಮಣಿ ಎಣ್ಣೆಯನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುವುದೇ ?

ಶ್ರೀಮತಿ ಮನೋರಮ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಬೆಳಗಾವಿ ಜಿಲ್ಲೆಗೆ ಪ್ರತಿ ತಿಂಗಳು ೩೫೬೦ ಕೆ.ಎಲ್. ಹಂಚಿಕೆಯಾಗುತ್ತಿದ್ದು, ಪಟ್ಟಣ ಪ್ರದೇಶದ ಕಾರ್ಡುದಾರರಿಗೆ ತಲಾ ೭ ಲೀಟರ್‌ನಂತೆ ಮತ್ತು ಗ್ರಾಮಾಂತರ ಪ್ರದೇಶದ ಕಾರ್ಡುದಾರರಿಗೆ ತಲಾ ೩ ಲೀಟರ್‌ನಂತೆ ವಿತರಿಸಲಾಗುತ್ತಿದೆ.

ಈ) ಹೌದು.

ಉ) ಗ್ರಾಮೀಣ ಪ್ರದೇಶ ಮತ್ತು ಪಟ್ಟಣ ಪ್ರದೇಶದ ಕಾರ್ಡುದಾರರಿಗೆ ಚಿಮಣಿ ಎಣ್ಣೆ ವಿತರಿಸುವಲ್ಲಿ ತಾರತಮ್ಯವಿರುವುದು ಸರ್ಕಾರಕ್ಕೆ ತಿಳಿದಿರುತ್ತದೆ. ಸಾರ್ವಜನಿಕ ವಿತರಣೆಯಲ್ಲಿ ಪ್ರಾರಂಭದಿಂದಲೂ ಈ ವ್ಯತ್ಯಾಸ ಇದ್ದಿತು. ಏಕೆಂದರೆ, ಗ್ರಾಮಾಂತರ ಪ್ರದೇಶದಲ್ಲಿ ಕಟ್ಟಿಗೆ, ಬೆರಣಿ ಇತ್ಯಾದಿ ಸಿಗುವುದರಿಂದ ಚಿಮಣಿ ಎಣ್ಣೆ ಬೇಡಿಕೆ ಕಡಿಮೆ ಇರುತ್ತದೆ. ಆದರೆ ಪಟ್ಟಣ ಪ್ರದೇಶದಲ್ಲಿ ಇವುಗಳು ದೊರೆಯದೆ ಇರುವುದರಿಂದ ಈ ರೀತಿಯ ತಾರತಮ್ಯ ಅನಿವಾರ್ಯವಾಗಿರುತ್ತದೆ. ರಾಜ್ಯಕ್ಕೆ ಪ್ರಸ್ತುತ ೪೮೫೨೨ ಕೆ.ಎಲ್ ಬಿಡುಗಡೆಯಾಗುತ್ತಿದ್ದು, ರಾಜ್ಯದ ಬೇಡಿಕೆಯು ೭೨೫೦೦ ಕೆ.ಎಲ್. ಆಗಿರುತ್ತದೆ. ನಮ್ಮ ಬೇಡಿಕೆಯಂತೆ ಕೇಂದ್ರ ಸರ್ಕಾರದಿಂದ ಬಿಡುಗಡೆ ಆದಲ್ಲಿ ಇತಹ ತಾರತಮ್ಯವನ್ನು ಹೋಗಲಾಡಿಸಲು ಕ್ರಮ ಕೈಗೊಳ್ಳಲಾಗುವುದು.

ಊ) ಸಾರ್ವಜನಿಕ ವಿತರಣಾ ಪದ್ಧತಿಯಡಿಯಲ್ಲಿ ಪಡಿತರ ಚೀಟಿದಾರರಿಗೆ ಮಾತ್ರ ಸೀಮೆ ಎಣ್ಣೆಯನ್ನು ವಿತರಿಸಲಾಗುತ್ತಿದೆ. ಇತ್ತೀಚ್ಚಲಾಗಿ ಜಾರಿಗೆ ಬಂದಿರುವ ಸಮಾನಾಂತರ ಸೀಮೆಎಣ್ಣೆ ಮಾರಾಟ ಯೋಜನೆಯಡಿಯಲ್ಲಿ (Parallel Marketing of Kerosene) ಯಾವುದೇ ಬಳಕೆದಾರರು ಸೀಮೆಎಣ್ಣೆಯನ್ನು ಮುಕ್ತ ಮಾರುಕಟ್ಟೆಯಲ್ಲಿ ಕೊಳ್ಳಬಹುದಾಗಿದೆ.

ರಾಜ್ಯ ಸರ್ಕಾರಿ ಸ್ವಾಮ್ಯದ ಎಂ.ಇ.ಐ ಕಾರ್ಖಾನೆಯ ಪ್ರಗತಿ

೪೨೨ (೭೪೦) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರದ್).—ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ .—

ಅ) ರಾಜ್ಯ ಸರ್ಕಾರಿ ಸ್ವಾಮ್ಯದ ಮೈಸೂರು ಎಲೆಕ್ಟ್ರಿಕಲ್ ಇಂಡಸ್ಟ್ರೀಸ್ ಕಾರ್ಖಾನೆಯನ್ನು ಯಾವಾಗ ಪ್ರಾರಂಭಿಸಲಾಯಿತು ?

ಆ) ಈ ಕಾರ್ಖಾನೆಯು ಕಾರ್ಯ ಚಟುವಟಿಕೆಗಳೇನು ಹಾಗೂ ಆ ಕಾರ್ಖಾನೆಯನ್ನು ಯಾವ ಯಾವ ಉಪಕರಣಗಳನ್ನು ತಯಾರಿಸುತ್ತದೆ ?

ಇ) ಕಾರ್ಖಾನೆಯು ಕಳೆದ ೫ ವರ್ಷಗಳಲ್ಲಿ ಎಷ್ಟು ಪ್ರಮಾಣದ ವಹಿವಾಟನ್ನು ನಡೆಸಿದೆ ?

ಈ) ಆ ಅವಧಿಯಲ್ಲಿ ಕಾರ್ಖಾನೆಯು ಎಷ್ಟು ಪ್ರಮಾಣದ ನಷ್ಟವನ್ನು ಅನುಭವಿಸಿದೆ ?

ಉ) ಲಾಭವನ್ನು ಗಳಿಸಿದ್ದಲ್ಲಿ, ಮೇಲ್ಕಂಡ ಅವಧಿಯಲ್ಲಿ ಎಷ್ಟು ಪ್ರಮಾಣದ ಲಾಭವನ್ನು ಗಳಿಸಿದೆ ?

ಊ) ಆ ಕಾರ್ಖಾನೆಯ ಅಭಿವೃದ್ಧಿಗಾಗಿ ಸರ್ಕಾರ ರೂಪಿಸಿರುವ ಕಾರ್ಯಕ್ರಮಗಳೇನು ?

ಋ) ಆ ಕಾರ್ಖಾನೆಯನ್ನು ಖಾಸಗಿಯವರಿಗೆ ಮಾರಾಟ ಮಾಡುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿ ಇದೆಯೇ ?

ಶ್ರೀ ರಾಮಲಿಂಗರೆಡ್ಡಿ (ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕಾ ರಾಜ್ಯ ಸಚಿವರು).—

ಅ) ಮೈಸೂರು ಎಲೆಕ್ಟ್ರಿಕಲ್ ಇಂಡಸ್ಟ್ರೀಸ್ ಲಿಮಿಟೆಡ್‌ನ್ನು ದಿನಾಂಕ ೧೩-೨-೧೯೪೫ ರಂದು ಪ್ರಾರಂಭಿಸಲಾಯಿತು.

ಆ) ಕಂಪೆನಿಯು ಸ್ವಿಚ್‌ಗೇರುಗಳು, ಮೋಟಾರ್ ಕಂಟ್ರೋಲ್ ಗೇರುಗಳು ಮತ್ತು ಎಲೆಕ್ಟ್ರಾನಿಕ್ ಉತ್ಪನ್ನಗಳನ್ನು ಉತ್ಪಾದನೆ ಮಾಡುವ ಕಾರ್ಯಚಟುವಟಿಕೆ ತೆಗೆದುಕೊಂಡಿದೆ ಮತ್ತು ಈ ಉಪಕರಣಗಳನ್ನು ತಯಾರಿಸುತ್ತಿದೆ.

ಇ) ಕಾರ್ಖಾನೆಯ ಕಳೆದ ೫ ವರ್ಷಗಳಲ್ಲಿನ ವಹಿವಾಟು ಈ ಕೆಳಕಂಡಂತಿದೆ.

(ರೂ. ಲಕ್ಷಗಳಲ್ಲಿ)

ವರ್ಷ	ಉತ್ಪಾದನೆ	ಮಾರಾಟ
೧೯೮೮–೮೯	೭೦೬.೪೭	೮೧೭.೧೪
೧೯೮೯–೯೦	೧೦೦೫.೧೪	೯೪೧.೦೦
೧೯೯೦–೯೧	೭೮೪.೬೨	೮೧೯.೩೬
೧೯೯೧–೯೨	೧೨೨೫.೦೪	೧೨೦೮.೬೩
೧೯೯೨–೯೩	೧೪೪೩.೧೧	೧೬೪೧.೯೮